# ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ

೯ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಡಾ: ಅಂಬೇಡ್ಕರ್ ವೀದಿ, ಬೆಂಗಳೂರು-01.

**ದಿನಾಂಕ:03.08.2015ರಂದು ಮಧ್ಯಾಹ್ನ 3.00 ಗಂಟೆಗೆ ಕರ್ನಾಟಕ ಆಡಳಿತ ಸೇವಾ ಅಧಿಕಾರಿಗಳ ಸಂಘದ ಸಭಾಂಗಣದಲ್ಲಿ ನಡೆದ ನಿಗಮದ 207ನೇ ನಿರ್ದೇಶಕರ ಮಂಡಳ ಸಭೆಯ ನಡವಳಿಗಳು:**

**ಹಾಜರಾತಿ:**

| ಹೆಸರು ಮತ್ತು ಪದನಾಮ | |
|---|---|
| ಕುಮಾರಿ ಮಲ್ಲಾಜಮ್ಮ,<br>ಮಾನ್ಯ ಅಧ್ಯಕ್ಷರು, ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ | ಅಧ್ಯಕ್ಷರು |
| ಶ್ರೀ ಗಂಗಾರಾಮ್ ಬಡೇರಿಯಾ, ಭಾ.ಆ.ಸೇ.,<br>ಸರ್ಕಾರದ ಕಾರ್ಯದರ್ಶಿಗಳು,<br>ಸಮಾಜ ಕಲ್ಯಾಣ ಇಲಾಖೆ,<br>ಕರ್ನಾಟಕ ಸರ್ಕಾರ | ಸದಸ್ಯರು |
| ಶ್ರೀಮತಿ ಎಂ.ವಿ. ಸಾವಿತ್ರಿ, ಭಾ.ಆ.ಸೇ.,<br>ಆಯುಕ್ತರು,<br>ಸಮಾಜ ಕಲ್ಯಾಣ ಇಲಾಖೆ, | ಸದಸ್ಯರು |
| ಶ್ರೀ.ಕೆ.ಸಿ.ಶ್ರೀರಾಮಯ್ಯ, ಕ.ಆ.ಸೇ., (ಎಸ್‌ಟಿಎಸ್)<br>ವ್ಯವಸ್ಥಾಪಕ ನಿರ್ದೇಶಕರು<br>ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ | ಸದಸ್ಯ ಕಾರ್ಯದರ್ಶಿ |
| ಶ್ರೀ ರಾಮಚಂದ್ರಯ್ಯ,<br>ಸರ್ಕಾರದ ಉಪ ಕಾರ್ಯದರ್ಶಿಗಳು (ಕಲ್ಯಾಣ)<br>ಆರ್ಥಿಕ ಇಲಾಖೆ | ಸದಸ್ಯರು |
| ಶ್ರೀಮತಿ ಎಲ್. ರಾಜೇಶ್ವರಿ<br>ಉಪ ಕಾರ್ಯದರ್ಶಿಗಳು,<br>ಸಾರ್ವಜನಿಕ ಉದ್ದಿಮೆಗಳ ಇಲಾಖೆ | ಸದಸ್ಯರು |
| ಶ್ರೀ ಭೋಜ್ಯಾನಾಯಕ್, ಡಿ.ಐ.ಜಿ.ಆರ್<br>ವ್ಯವಸ್ಥಾಪಕ ನಿರ್ದೇಶಕರು,<br>ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ ನಿಯಮಿತ | ಸದಸ್ಯರು |

**ಗೈರು ಹಾಜರಿ:**

| | |
|---|---|
| ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು<br>ರಾಷ್ಟ್ರೀಯ ಪರಿಶಿಷ್ಟ ಜಾತಿ ಹಣಕಾಸು ಮತ್ತು ಅಭಿವೃದ್ಧಿ ನಿಗಮ, ಭಾರತ ಸರ್ಕಾರ, ನವದೆಹಲಿ | ಸದಸ್ಯರು |
| ನಿರ್ದೇಶಕರು,<br>ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯ,<br>ಭಾರತ ಸರ್ಕಾರ, ನವದೆಹಲಿ | ಸದಸ್ಯರು |



12/8/15

ವ್ಯವಸ್ಥಾಪಕ ನಿರ್ದೇಶಕರು ನಿಗಮದ ಮಾನ್ಯ ಅಧ್ಯಕ್ಷರನ್ನು ಹಾಗೂ ಹೊಸದಾಗಿ ಅಧಿಕಾರ ವಹಿಸಿಕೊಂಡಿರುವ ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ ಇವರನ್ನು ಸ್ವಾಗತಿಸಿ, ಹಿರಿಯ ಮಂಡಳಿ ನಿರ್ದೇಶಕರಾದ ಕಾರ್ಯದರ್ಶಿಗಳು ನಿಗಮದ ಶ್ರೇಯೋಭಿವೃದ್ಧಿಗೆ ಸೂಕ್ತ ಸಲಹೆ ಸೂಚನೆಗಳನ್ನು ನೀಡಲು ಕೋರಿದರು. ಮುಂದುವರೆದು ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಹಾಗೂ ಹಾಜರಿದ್ದ ನಿರ್ದೇಶಕರ ಮಂಡಳಿಯ ಇತರೆ ನಿರ್ದೇಶಕರನ್ನು ಮಂಡಳಿ ಸಭೆಗೆ ಸ್ವಾಗತಿಸಿದರು. ಸಭೆಗೆ ಕೋರಂ ಇರುವುದನ್ನು ಖಾತರಿಪಡಿಸಿಕೊಂಡ ನಂತರ 207ನೇ ಆಡಳಿತ ಮಂಡಳಿಯ ಸಭೆಯನ್ನು ನಡೆಸಲು ಅನುಮತಿ ನೀಡಲು ಮತ್ತು ಸಭೆಯ ಅಧ್ಯಕ್ಷತೆಯನ್ನು ವಹಿಸಲು ವ್ಯವಸ್ಥಾಪಕ ನಿರ್ದೇಶಕರು ನಿಗಮದ ಮಾನ್ಯ ಅಧ್ಯಕ್ಷರನ್ನು ಕೋರಿದರು. 207ನೇ ಆಡಳಿತ ಮಂಡಳಿ ಸಭೆಯ ವಿಷಯವಾರು ನಡವಳಿ ಈ ಕೆಳಗಿನಂತಿದೆ.

**ವಿಷಯ ಸಂಖ್ಯೆ: 01: 206ನೇ ನಿರ್ದೇಶಕರ ಮಂಡಳಿ ಸಭೆಯ ನಡವಳಿ ಅಂಗೀಕರಿಸುವ ಕುರಿತು.**

* * * * *

ದಿನಾಂಕ:25.04.2015 ರಂದು ನಡೆದ 206ನೇ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ತೆಗೆದುಕೊಂಡ ವಿಷಯವಾರು ತೀರ್ಮಾನಗಳ ನಡವಳಿಯನ್ನು ಸರ್ವ ಸದಸ್ಯರಿಗೂ ಕಳುಹಿಸಲಾಗಿತ್ತು. ಯಾವುದೇ ನಿರ್ದೇಶಕರುಗಳಿಂದ ಸದರಿ ನಡವಳಿಯ ಬಗ್ಗೆ ವ್ಯತಿರಿಕ್ತ ಅಭಿಪ್ರಾಯಗಳು ಬಂದಿರುವುದಿಲ್ಲವೆಂಬುದನ್ನು ಸಭೆಯ ಗಮನಕ್ಕೆ ತರಲಾಯಿತು ಮತ್ತು ನಡವಳಿಯನ್ನು ಯಥಾವತ್ತಾಗಿ ಅಂಗೀಕರಿಸುವ ಬಗ್ಗೆ ಸಭೆಯನ್ನು ಕೋರಲಾಯಿತು.

**ನಿರ್ಣಯ: ಮಂಡಳಿಯ ನಿರ್ದೇಶಕರಿಂದ ವ್ಯತಿರಿಕ್ತ ಅಭಿಪ್ರಾಯಗಳು ಬಾರದ ಕಾರಣ, ನಡವಳಿಯನ್ನು ಯಥಾವತ್ತಾಗಿ ಅಂಗೀಕರಿಸಿ ಸ್ಥಿರೀಕರಿಸಲು ಸಭೆಯು ನಿರ್ಣಯಿಸಿತು.**

**ವಿಷಯ ಸಂಖ್ಯೆ:2: ನಿಗಮದ 206ನೇ ನಿರ್ದೇಶಕರ ಮಂಡಳಿ ಸಭೆಯ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮಗಳ ಬಗ್ಗೆ ಅನುಪಾಲನಾ ವರದಿ**

206ನೇ ನಿರ್ದೇಶಕರ ಮಂಡಳಿ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳ ಬಗ್ಗೆ ಕೈಗೊಂಡಿರುವ ಕ್ರಮಗಳ ಬಗ್ಗೆ ಸಭೆಗೆ ವಿವರಿಸಲಾಯಿತು. ಅನುಸರಣಾ ವರದಿಯನ್ನು ಸಭೆಯು ಅವಗಾಹಿಸಿ ಅಂಗೀಕರಿಸಿತು.

**ವಿಷಯ ಸಂಖ್ಯೆ: 03 :** 2015-16ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆ ಮತ್ತು ಆಡಳಿತ ನಿರ್ವಹಣೆ ವೆಚ್ಚ ಅನುಮೋದಿಸುವ ಕುರಿತು.

ರಾಜ್ಯ ಸರ್ಕಾರವು 2015-16ನೇ ಸಾಲಿನ ಆಯವ್ಯಯದಲ್ಲಿ ಪರಿಶಿಷ್ಟ ಜಾತಿ ಜನಾಂಗದವರ ಆರ್ಥಿಕ ಅಭಿವೃದ್ಧಿಗಾಗಿ ನಿಗಮದಿಂದ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳಿಗಾಗಿ ಸಾಲ ಮನ್ನಾ ಮೊತ್ತ ರೂ.106.00ಕೋಟಿಗಳು ಸೇರಿದಂತೆ ಒಟ್ಟು ರೂ.451.00 ಕೋಟಿಗಳನ್ನು ಒದಗಿಸಿರುವ ಬಗ್ಗೆ ಹಾಗೂ ಯೋಜನಾವಾರು ಅನುದಾನದ ಹಂಚಿಕೆ ವಿವರಗಳನ್ನು ಸಭೆಗೆ ವಿವರಿಸಲಾಯಿತು. ವಿವರಗಳು ಈ ಕೆಳಕಂಡಂತಿವೆ.

12/8/15

| ಕ್ರ.ಸಂ | ಯೋಜನೆಯ ಹೆಸರು ಮತ್ತು ಲೆಕ್ಕ ಶೀರ್ಷಿಕೆ | ಆಯವ್ಯಯದಲ್ಲಿ ನಿಗಧಿಪಡಿಸಿದ ಹಣ (ಲಕ್ಷ ರೂ.ಗಳಲ್ಲಿ) | | |
|---|---|---|---|---|
| | | ರಾಜ್ಯ ಸರ್ಕಾರ | ಕೇಂದ್ರ ಸರ್ಕಾರ | ಒಟ್ಟು |
| 1 | 2225-01-190-2-01<br>ಸ್ವಯಂ ಉದ್ಯೋಗ ಯೋಜನೆ | 4000.00 | - | 4000.00 |
| 2 | 2225-01-102-0-11<br>ಗಂಗಾ ಕಲ್ಯಾಣ ಯೋಜನೆ | 20000.00 | - | 20000.00 |
| 3 | 2225-01-190-2-09<br>ಮೈಕ್ರೋ ಕ್ರೆಡಿಟ್ (ಸಹಾಯಧನ) ಯೋಜನೆ | 1000.00 | - | 1000.00 |
| | 4225-01-190-0-03<br>ಮೈಕ್ರೋ ಕ್ರೆಡಿಟ್ (ಸಾಲ) ಯೋಜನೆ | 2000.00 | - | 2000.00 |
| 4 | 4225-01-190-0-01<br>ಷೇರು ಬಂಡವಾಳ | 3825.00 | 3675.00 | 7500.00 |
| 5 | ಸಾಲ ಮನ್ನಾ ಯೋಜನೆ<br>4225-01-800-0-22 | 10600.00 | - | 10600.00 |
| | ಒಟ್ಟು | 41425 | 3675.00 | 45100.00 |

2014-15ನೇ ಸಾಲಿನಲ್ಲಿ ವಿನಿಯೋಗವಾಗದೇ ಬಾಕಿ ಉಳಿದಿರುವ ವಿಶೇಷ ಕೇಂದ್ರಿಯ ನೆರವು ಅನುದಾನಕ್ಕೆ ಪ್ರತ್ಯೇಕವಾಗಿ ಮತ್ತು 2015-16ನೇ ಸಾಲಿನಲ್ಲಿ ಯೋಜನೆಗಳ ಅನುಷ್ಠಾನಕ್ಕೆ ಹಂಚಿಕೆ ಮಾಡಿರುವ ಅನುದಾನ ವಿನಿಯೋಗಿಸಲು ಕ್ರಿಯಾ ಯೋಜನೆಯನ್ನು ರೂಪಿಸಲಾಗಿದ್ದು, ವಿವರಗಳನ್ನು ಅನುಬಂಧ-1ರಲ್ಲಿ ಹಾಗೂ ಸಿಬ್ಬಂದಿ ಮತ್ತು ಆಡಳಿತ ನಿರ್ವಹಣೆ ವೆಚ್ಚದ ವಿವರಗಳನ್ನು ಅನುಬಂಧ-2ರಲ್ಲಿದ್ದಂತೆ ಸಭೆಗೆ ವಿವರಿಸಲಾಯಿತು.

ಮುಂದುವರೆದು, ಮಾನ್ಯ ಸಮಾಜ ಕಲ್ಯಾಣ ಸಚಿವರು 2015-16ನೇ ಸಾಲಿನಲ್ಲಿ ಮೀಸಲು ವಿಧಾನಸಭಾ ಕ್ಷೇತ್ರಗಳಿಗೆ ಶೇ:5 ರಷ್ಟು ಹೆಚ್ಚಿಗೆ ಗುರಿ ನಿಗಧಿಪಡಿಸಲು ಮತ್ತು ಗಂಗಾ ಕಲ್ಯಾಣ ಯೋಜನೆಯಡಿ ಘಟಕ ವೆಚ್ಚ ಹೆಚ್ಚಿಸಬೇಕಾಗಿರುವ ಕೆಲವು ಜಿಲ್ಲೆಗಳಿಗೆ ಆರ್ಥಿಕ ಗುರಿಯನ್ನು ಆಧರಿಸಿ ಗುರಿ ನಿಗಧಿಪಡಿಸಲು ಸಲಹೆ ಮಾಡಿರುವ ವಿಷಯವನ್ನು ಸಭೆಯ ಗಮನಕ್ಕೆ ತರಲಾಯಿತು.

ಗಂಗಾ ಕಲ್ಯಾಣ ಯೋಜನೆಯಡಿ ನಗರ ಪ್ರದೇಶದ ವಿಧಾನಸಭಾ ಕ್ಷೇತ್ರಗಳಿಗೆ ಗುರಿಯನ್ನು ನೀಡುತ್ತಿಲ್ಲವಾದ್ದರಿಂದ ಆ ಗುರಿಗೆ ತಕ್ಕಂತೆ ಇತರೆ ಯೋಜನೆಗಳಲ್ಲಿ ಈ ವಿಧಾನ ಸಭಾ ಕ್ಷೇತ್ರಗಳಿಗೆ ಹೆಚ್ಚಿನ ಸಂಖ್ಯೆಯ ಗುರಿಯನ್ನು ನೀಡುವ ಬಗ್ಗೆ ವ್ಯವಸ್ಥಾಪಕ ನಿರ್ದೇಶಕರು ಸಭೆಯ ಗಮನಕ್ಕೆ ತಂದರು. ಸಭೆಯು ಈ ಬಗ್ಗೆ ಸುಧೀರ್ಘವಾಗಿ ಚರ್ಚಿಸಿತು ಮತ್ತು ನಗರ ಪ್ರದೇಶದ ವಿಧಾನಸಭಾ ಕ್ಷೇತ್ರಗಳಿಗೆ ಇತರೆ ಯೋಜನೆಗಳಲ್ಲಿ ಸ್ವಲ್ಪಮಟ್ಟಿನ ಹೆಚ್ಚಿನ ಗುರಿಯನ್ನು ನೀಡುವುದು ಸೂಕ್ತವೆಂಬ ಅಭಿಪ್ರಾಯಕ್ಕೆ ಬರಲಾಯಿತು.

- ಕ್ರಿಯಾ ಯೋಜನೆಯಲ್ಲಿ ನಿಗಧಿಪಡಿಸಿರುವ ಗುರಿಗೆ ಅನುಗುಣವಾಗಿ ಅರ್ಹ ಫಲಾಪೇಕ್ಷಿಗಳಿಗೆ ಸೌಲಭ್ಯ ಕಲ್ಪಿಸಲು ಪತ್ರಿಕೆಗಳಲ್ಲಿ ಪ್ರಕಟಣೆ ನೀಡುವ ಮೂಲಕ ಅರ್ಜಿಗಳನ್ನು ಆಹ್ವಾನಿಸಲು ಕ್ರಮ ಕೈಗೊಳ್ಳಲಾಗಿದ್ದು, ಈ ಕ್ರಮಕ್ಕೆ ಘಟನೋತ್ತರ ಅನುಮೋದನೆ ನೀಡಲು ತೀರ್ಮಾನಿಸಿತು.

- ಚಿಂಚೋಳಿ ವಿಧಾನಸಭಾ ಕ್ಷೇತ್ರಕ್ಕೆ ಹೈನುಗಾರಿಕೆ ಯೋಜನೆಯಡಿ ಸರ್ಕಾರವು ರೂ.3.00ಕೋಟಿಗಳ ಸಹಾಯಧನವನ್ನು 2014-15ನೇ ಸಾಲಿನಲ್ಲಿ ಒದಗಿಸಿದ್ದು, ಈ ಅನುದಾನವನ್ನು 600 ಹಸುಗಳ ಖರೀದಿಗೆ ಅನುಮತಿ ನೀಡಿ ಸರ್ಕಾರವು ಆದೇಶ ನೀಡಿದ್ದು, ಸದರಿ ಆದೇಶದಂತೆ ಈ ಮೊತ್ತವನ್ನು ಚಿಂಚೋಳಿ ವಿಧಾನಸಭಾ ಕ್ಷೇತ್ರಕ್ಕೆ ಬಿಡುಗಡೆ ಮಾಡುವ ವಿಚಾರವನ್ನು ಸಭೆಯ ಗಮನಕ್ಕೆ ತರಲಾಯಿತು.

- 2014-15ನೇ ಸಾಲಿನವರೆಗೆ ಸರ್ಕಾರವು ಆಯವ್ಯಯದಲ್ಲಿ ಒದಗಿಸಿದ್ದ ಷೇರು ಬಂಡವಾಳದಲ್ಲಿ ಉಳಿದಿರುವ ಅನುದಾನ ಮತ್ತು 2015-16ನೇ ಸಾಲಿನಲ್ಲಿ ಒದಗಿಸಿರುವ ಷೇರು ಬಂಡವಾಳದ ರಾಜ್ಯದ ಪಾಲು ರೂ.38.25ಕೋಟಿ ಸೇರಿ ಒಟ್ಟು ರೂ.71.15ಕೋಟಿ ಮೊತ್ತವನ್ನು ಕ್ರಮವಾಗಿ ರೂ.69.50ಕೋಟಿ ಭೂ ಒಡೆತನ ಯೋಜನೆಗೆ ಅವಧಿಸಾಲವಾಗಿ ಉಪಯೋಗಿಸಲು ಮತ್ತು ರೂ.1.65ಕೋಟಿಗಳನ್ನು ಸಫಾಯಿ ಕರ್ಮಚಾರಿ ಪುನರ್ವಸತಿ ಯೋಜನೆಗೆ ಬೀಜಧನವಾಗಿ ಉಪಯೋಗಿಸಲು ಸಭೆಯ ಗಮನಕ್ಕೆ ತರಲಾಯಿತು.

- ಯೋಜನಾವಾರು ಗುರಿಯಲ್ಲಿ ಶೇ:20 ರಷ್ಟನ್ನು ಕಾಯ್ದಿರಿಸಿಕೊಳ್ಳುವ ಬಗ್ಗೆ ಸಭೆಯು ಸುಧೀರ್ಘವಾಗಿ ಚರ್ಚಿಸಿ ಮಾನ್ಯ ಸಮಾಜ ಕಲ್ಯಾಣ ಸಚಿವರು ಮತ್ತು ನಿಗಮದ ಅಧ್ಯಕ್ಷರ ಬಳಿ ಪರಿಶಿಷ್ಟ ಜಾತಿಯ ಕಡುಬಡವರು, ದೇವದಾಸಿ ಕುಟುಂಬಗಳು, ವಿಕಲ ಚೇತನರು, ದೌರ್ಜನ್ಯದಲ್ಲಿ ನೊಂದ ಸಂತ್ರಸ್ಥರು, ವಿಧವೆಯರು, ಮಾನ್ಯ ಮುಖ್ಯಮಂತ್ರಿಗಳ ಜನತಾ ದರ್ಶನದಲ್ಲಿ ಬರುವ ಮನವಿಗಳು, ಜನಸ್ಪಂದನಾ ಕೋಶದಿಂದ ಬರುವ ಶಿಫಾರಸ್ಸುಗಳು, ಇತ್ಯಾಧಿ ಫಲಾಪೇಕ್ಷಿಗಳಿಂದ ಸೌಲಭ್ಯ ಕೋರಿ ಬರುತ್ತಿದ್ದು, ಇವರಿಗೆ ಆಧ್ಯತೆಯ ಮೇಲೆ ಸೌಲಭ್ಯಗಳನ್ನು ಕೊಡುವ ದೃಷ್ಟಿಯಿಂದ ಶೇ:20 ರಷ್ಟು ಗುರಿಯನ್ನು ನಿಗಮದಲ್ಲಿ ಉಳಿಸಿಕೊಳ್ಳುವುದು ಅನಿವಾರ್ಯವೆಂಬ ಅಭಿಪ್ರಾಯಕ್ಕೆ ಬರಲಾಯಿತು.

**ನಿರ್ಣಯ: ಈ ಬಗ್ಗೆ ಸಭೆಯು ಸುಧೀರ್ಘವಾಗಿ ಚರ್ಚಿಸಿತು. (1) 2015-16ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆ ಅನುಬಂಧ-1 ಮತ್ತು 2ನೇ ತ:ಖ್ತೆಯಲ್ಲಿ ತೋರಿಸಿರುವಂತೆ ಒಟ್ಟಾರೆ ಭೌತಿಕ ಮತ್ತು ಆರ್ಥಿಕ ಗುರಿಗೆ ಸಭೆಯು ಅನುಮೋದನೆ ನೀಡಿತು. (2) ಶೇ.20ರಷ್ಟು ಭೌತಿಕ ಮತ್ತು ಆರ್ಥಿಕ ಗುರಿಯನ್ನು ಕಾಯ್ದಿರಿಸಲು (3) ನಗರ ಪ್ರದೇಶದ ವಿಧಾನಸಭಾ ಕ್ಷೇತ್ರಗಳಿಗೆ ಗಂಗಾ ಕಲ್ಯಾಣ ಯೋಜನೆ ಮತ್ತು ಭೂ ಒಡೆತನ ಯೋಜನೆಯಡಿ ಗುರಿಗಳನ್ನು ನೀಡದೇ ಇರುವ ಕಾರಣ ಈ ಕ್ಷೇತ್ರಗಳಿಗೆ ಶೇ.5ರಷ್ಟು ಗುರಿಯನ್ನು ಹೆಚ್ಚುವರಿಯಾಗಿ ಹಂಚಿಕೆ ಮಾಡಲು ಹಾಗೂ (4) ಒಟ್ಟಾರೆ ಉಳಿದಿರುವ ಷೇರು ಬಂಡವಾಳವನ್ನು ಭೂ ಒಡೆತನ ಯೋಜನೆ ಮತ್ತು ಸಫಾಯಿ ಕರ್ಮಚಾರಿ ಪುನರ್ವಸತಿ ಯೋಜನೆಗೆ ಪ್ರಸ್ತಾಪಿಸಿರುವಂತೆ ವಿನಿಯೋಗಿಸಲು ತೀರ್ಮಾನಿಸಿತು.**

12/8/15

ಅನುಬಂಧ-1

## ಡಾ॥ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಕೇಂದ್ರ ಕಛೇರಿ, ಬೆಂಗಳೂರು.

2015-16ನೇ ಸಾಲಿಗೆ ವಿವಿಧ ಯೋಜನೆಗಳಿಗೆ ನಿಗದಿ ಪಡಿಸಿದ ಗುರಿ.

| ಕ್ರ. ಸಂ | ಯೋಜನೆ ಹೆಸರು ಮತ್ತು ಲೆಕ್ಕಶೀರ್ಷಿಕೆ | | ಕಾರ್ಯಕ್ರಮಗಳು | ಭೌತಿಕ ಗುರಿ | ಆರ್ಥಿಕ ಗುರಿ(ರೂ.ಲಕ್ಷಗಳಲ್ಲಿ) | | | | |
|---|---|---|---|---|---|---|---|---|---|
| | | | | ಪ್ರಸಕ್ತ ಸಾಲಿನ ಗುರಿ | ಪ್ರಸಕ್ತ ಸಾಲಿನ ಸಹಾಯಧನ | ಬೀಜಧನ ಸಾಲ | ಎನ್.ಎಸ್.ಸಿ. ಎಫ್.ಡಿ.ಸಿ. ಸಾಲ | ಎನ್.ಎಸ್.ಕೆ. ಎಫ್.ಡಿ.ಸಿ. ಸಾಲ | ಒಟ್ಟು |
| 1 | ಸ್ವಯಂ ಉದ್ಯೋಗ ಯೋಜನೆ: 2225-01-190-2-01 | 1 | ಸ್ವಯಂ ಉದ್ಯೋಗ ಯೋಜನೆ | | | | | | |
| | | | ಅ). ಸ್ವಯಂ ಉದ್ಯೋಗ ಯೋಜನೆ (ರೂ.1.00ಲಕ್ಷ ಮಿತಿಯೊಳಗೆ) | 4000 | 1400.00 | 0.00 | 0.00 | 0.00 | 1400.00 |
| | | | ಆ). ಐ.ಎಸ್.ಬಿ – (ರೂ.1.00ಲಕ್ಷ ಮೇಲ್ಪಟ್ಟು) | 970 | 1940.00 | 0.00 | 0.00 | 0.00 | 1940.00 |
| | | | ಇ) ಹೈನುಗಾರಿಕೆ | 1000 | 500.00 | 0.00 | 0.00 | 0.00 | 500.00 |
| | | | ಈ) ತರಬೇತಿ (ಭಾರಿ ವಾಹನ ಚಾಲನಾ ತರಬೇತಿ) | 1000 | 160.00 | 0.00 | 0.00 | 0.00 | 160.00 |
| | | | ಒಟ್ಟು (1) | 6970 | 4000.00 | 0.00 | 0.00 | 0.00 | 4000.00 |
| 2 | ಮೈಕ್ರೋ ಫೈನಾನ್ಸ್ (ಕಿರುಸಾಲ) ಯೋಜನೆ 2225-01-190-2-09/4225-01-190-0-03 | 2 | ಮೈಕ್ರೋ ಫೈನಾನ್ಸ್ (ಕಿರುಸಾಲ) ಘಟಕ ವೆಚ್ಚ (ರೂ.15,000/-) | 10000 | 1000.00 | 500.00 | 0.00 | 0.00 | 1500.00 |
| 3 | ಪರಿಶಿಷ್ಟ ಜಾತಿ ಉಪ ಯೋಜನೆಯ ವಿಶೇಷ ಕೇಂದ್ರೀಯ ನೆರವಿನಡಿ ಬಿಡುಗಡೆಯಾದ ಅನುದಾನ 2225-01-793-0-00 | 1 | ವಿಕಲ ಚೇತನರಿಗೆ ಆರ್ಥಿಕ ನೆರವು | 5310 | 531.00 | 796.50 | 0.00 | 0.00 | 1327.50 |
| | | 2 | ಮಹಿಳೆಯರ ಆರ್ಥಿಕ ಅಭಿವೃದ್ಧಿ – ಮೈಕ್ರೋ ಫೈನಾನ್ಸ್(ಕಿರುಸಾಲ) | 8180 | 818.00 | 409.00 | 0.00 | 0.00 | 1227.00 |
| | | 3 | ದೌರ್ಜನ್ಯ ಪ್ರಕರಣದಲ್ಲಿ ನೊಂದ ಸಂತ್ರಸ್ಥರಿಗೆ ಪುನರ್ವಸತಿ | 1222 | 122.20 | 183.30 | 0.00 | 0.00 | 305.50 |
| | | 4 | ಸ್ವಯಂ ಉದ್ಯೋಗ ಯೋಜನೆ | 1430 | 500.00 | 0.00 | 0.00 | 0.00 | 500.00 |
| | | 5 | ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆ | 100 | 200.00 | 0.00 | 0.00 | 0.00 | 200.00 |
| | | | ಒಟ್ಟು (3) | 16242 | 2171.20 | 1388.80 | 0.00 | 0.00 | 3560.00 |
| 4 | ಎನ್ಎಸ್ಎಫ್‌ಡಿಸಿ ಸಹಯೋಗದ ಯೋಜನೆಗಳು: | | ಅ) ಮೈಕ್ರೋ ಕ್ರೆಡಿಟ್ ಯೋಜನೆ-1 | 3000 | 300.00 | 0.00 | 450.00 | 0.00 | 750.00 |
| | | | ಆ) ಮಹಿಳಾ ಸಮೃದ್ಧಿ ಯೋಜನೆ | 1000 | 100.00 | 0.00 | 150.00 | 0.00 | 250.00 |
| | | | ಇ) ವಕೀಲರ ಕಛೇರಿ | 50 | 0.00 | 12.50 | 72.50 | 0.00 | 85.00 |
| | | * | ಉ) ಇನ್ನೋವಾ ವಾಹನ | 300 | 1200.00 | 0.00 | 3300.00 | 0.00 | 4500.00 |
| | | * | ಊ)ವಕೀಲರ ಕಛೇರಿ (ಹೆಚ್ಚುವರಿ) | 100 | 0.00 | 25.00 | 145.00 | 0.00 | 170.00 |
| | | | ಒಟ್ಟು (4) | 4450 | 1600.00 | 37.50 | 4117.50 | 0.00 | 5755.00 |
| | | | ಒಟ್ಟು ಮೊತ್ತ (1+2+3+4) | 37662 | 8771.20 | 1926.30 | 4117.50 | 0.00 | 14815.00 |
| 5 | ಭೂ ಒಡೆತನ ಯೋಜನೆ | | ಭೂ ಒಡೆತನ ಕಾರ್ಯಕ್ರಮ | 1800 | 9000.00 | 14450.00 | 2653.00 | 0.00 | 26103.00 |
| | | | 4225-01-800-0-07 | | | | | | |
| 6 | ಗಂಗಾ ಕಲ್ಯಾಣ ಯೋಜನೆ: | | ಅ)ಏತ ನೀರಾವರಿ ಹೊಸ ಕಾಮಗಾರಿಗಳಿಗೆ -330 ಘಟಕಗಳು) | 1416 | 1500.00 | 0.00 | 0.00 | 0.00 | 1500.00 |
| | 2225-01-102-0-11 | | ಆ) ವೈಯಕ್ತಿಕ ನೀರಾವರಿ ಕೊಳವೆಬಾವಿ | 9250 | 13875.00 | 0.00 | 4625.00 | 0.00 | 18500.00 |
| | 2225-01-102-0-08 (SCA) | | ಇ) ವೈಯಕ್ತಿಕ ನೀರಾವರಿ ಕೊಳವೆಬಾವಿ-ಎಸ್‌ಸಿಎ | 2319 | 3478.50 | 0.00 | 1159.50 | 0.00 | 4638.00 |
| | ವಿದ್ಯುದ್ದೀಕರಣ | | ಈ) ವಿದ್ಯುದ್ದೀಕರಣ | | 5784.50 | 0.00 | 0.00 | 0.00 | 5784.50 |
| | | | ಒಟ್ಟು | 12985 | 24638.00 | 0.00 | 5784.50 | 0.00 | 30422.50 |
| 7 | ಷೇರು ಬಂಡವಾಳ-4225-01-190-0-01 | | | | | | | | |
| | ರಾಜ್ಯ – ರೂ.3825.00ಲಕ್ಷ | | | | | | | | |
| | ಕೇಂದ್ರ – ರೂ.3675.00ಲಕ್ಷ | | | | | | | | |
| 8 | ಸಫಾಯಿ ಕರ್ಮಚಾರಿ ಪುನರ್ವಸತಿ ಯೋಜನೆ | 1 | ಮ್ಯಾನ್ಯುಯೆಲ್ ಸ್ಕ್ಯಾವೆಂಜರ್ಸ್ ಪುನರ್ವಸತಿ | 302 | 700.00 | 0.00 | 0.00 | 271.80 | 971.80 |
| | | 2 | ಸಫಾಯಿ ಕರ್ಮಚಾರಿ ಪುನರ್ವಸತಿ ಯೋಜನೆ | 4000 | 400.00 | 165.00 | 0.00 | 3600.00 | 4165.00 |
| | | | ಒಟ್ಟು | 4302 | 1100.00 | 165.00 | 0.00 | 3871.80 | 5136.80 |
| 9 | ಸಾಲ ಮನ್ನಾ ಯೋಜನೆ 4225-01-800-0-22 | | | | 10600.00 | 0.00 | 0.00 | 0.00 | 10600.00 |
| | | | | 56749 | 54109.20 | 16541.30 | 12555.00 | 3871.80 | 87077.30 |

ಷರಾ: * ಈ ಎರಡು ಯೋಜನೆಗಳಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಹಣಕಾಸು ನಿಗಮದಿಂದ ಅವಧಿಸಾಲ ನಿರೀಕ್ಷಿಸಿ ಗುರಿ ನಿಗದಿಪಡಿಸಲಾಗಿದೆ.

ರಾಷ್ಟ್ರೀಯ ಪ.ಜಾತಿ ಹಣಕಾಸು ಮತ್ತು ಅಭಿವೃದ್ಧಿ ನಿಗಮದಿಂದ ಮತ್ತು ರಾಷ್ಟ್ರೀಯ ಸಫಾಯಿ ಕರ್ಮಚಾರಿ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಅವಧಿಸಾಲ ರೂ.7571.50ಲಕ್ಷಗಳು ಲಭ್ಯವಿದ್ದು, ರೂ.8856.30ಲಕ್ಷಗಳ ಹಣವನ್ನು ನಿರೀಕ್ಷಿಸಿ ಸಾಲಸೌಲಭ್ಯ ಕಲ್ಪಿಸಲು ಉದ್ದೇಶಿಸಲಾಗಿದೆ.



12/8/15